# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ/1308/2021
ಪಿಓ/ಎ.ಆರ್.ಇ–2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:16/12/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ತುಮಕೂರು ಜಿಲ್ಲೆ, ಶಿರಾ ಟೌನ್, ತಾಲ್ಲೂಕು ಕಛೇರಿ, (ಹಕ್ಕು ದಾಖಲೆ ಶಾಖೆ), ಗ್ರಾಮ ಲೆಕ್ಕಾಧಿಕಾರಿ, **ಶ್ರೀಮತಿ ವಿಜಯಲಕ್ಷ್ಮೀ ಹೆಚ್. ಎಂ. ಕೋಂ ವಿಜಯಕುಮಾರ್,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ತುಮಕೂರು, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀಮತಿ ವಿಜಯಲಕ್ಷ್ಮೀ ಹೆಚ್.ಎಂ. ಕೋಂ ವಿಜಯಕುಮಾರ್, ಗ್ರಾಮ ಲೆಕ್ಕಾಧಿಕಾರಿ, ತಾಲ್ಲೂಕು ಕಛೇರಿ, (ಹಕ್ಕು ದಾಖಲೆ ಶಾಖೆ), ಶಿರಾ ಟೌನ್, ತುಮಕೂರು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ ಮನೋಜ್ ಕುಮಾರ್ ಸಿ.ಜಿ. ಬಿನ್ ಲೇಟ್ ಗೋಪಾಲ ಕೃಷ್ಣ, ಮೆಡಿಕಲ್ ಸ್ಟೋರ್ ಮಾಲೀಕರು, ಚಿನ್ನೇನಹಳ್ಳಿ, ಕಳ್ಳಂಬೆಳ್ಳ ಹೋಬಳಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ತುಮಕೂರು, ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ:03/2018** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರು ಅವರ ಪಿತ್ರಾರ್ಜಿತ ಆಸ್ತಿ ಬಾಬ್ತು ಶಿರಾ ತಾಲ್ಲೂಕು, ಚಿನ್ನೇನಹಳ್ಳಿ ಗ್ರಾಮಕ್ಕೆ ಸೇರಿದ ಸ.ನಂ.3/3 ರಲ್ಲಿ 1–20 ಎಕರೆ/ಗುಂಟೆ ಜಮೀನಿನ ಖಾತೆ ಬದಲಾವಣೆಯ ಆದೇಶದ ಪ್ರತಿಯನ್ನು ನೀಡಬೇಕಾಗಿದ್ದ ವಿಚಾರವಾಗಿ ಕೇಳಲು ಎದುರುದಾರರನ್ನು ತಾಲ್ಲೂಕು ಕಚೇರಿಯಲ್ಲಿರುವ ಹಕ್ಕು ದಾಖಲೆ ವಿಭಾಗಕ್ಕೆ ಬಂದು ಭೇಟಿಮಾಡಿದ್ದು, ಆಗ ಎದುರುದಾರರು ಮುಂಗಡವಾಗಿ ರೂ. 4,000/–ಗಳ ಲಂಚದ ಹಣವನ್ನು ಎರಡು ಕಂತುಗಳಲ್ಲಿ ಪಡೆದಿರುತ್ತಾರೆ. ನಂತರ ದಿನಾಂಕ: 11/05/2018ರಂದು ಖಾತೆ ಬದಲಾವಣೆಯ ಆದೇಶದ ಪ್ರತಿಯನ್ನು ನೀಡಲು

ಎದುರುದಾರರಿಗೆ ಪೋನ್ ಮಾಡಿ ಕೇಳಿದಾಗ, ಸದರಿ ಆದೇಶದ ಪ್ರತಿಯನ್ನು ನೀಡಲು ಪುನ: ರೂ.3,000/- ಗಳನ್ನು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ನಂತರ ದಿನಾಂಕ:08/06/2018ರಂದು ದೂರುದಾರರು ತಮ್ಮ ಮೊಬೈಲ್ ನಂ.8217293936 ರಿಂದ ಎದುರುದಾರರ ಮೊಬೈಲ್ ನಂ.8660307569ಕ್ಕೆ ಕರೆ ಮಾಡಿ ಖಾತೆ ಬದಲಾವಣೆಯ ಆದೇಶದ ಪ್ರತಿಯನ್ನು ನೀಡಲು ಕೇಳಿದಾಗ, ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ.

ii. ದಿನಾಂಕ:20/06/2018 ರಂದು ಬೆಳಿಗ್ಗೆ 11-30ಗಂಟೆಗೆ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ತುಮಕೂರು ಎಸಿಬಿ ಪೋಲಿಸ್ ಠಾಣೆ ಮೊ. ಸಂ. 03/2018 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ದಿನಾಂಕ: 20/06/2018 ರಂದು ಮಧ್ಯಾಹ್ನ 12-15 ಗಂಟೆಗೆ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ವೆಂಕಟರಾಜು, 2) ಶ್ರೀಮತಿ ಗೀತಾ ಕೆ. ಎನ್. (ನೆರಳು ಸಾಕ್ಷಿ), ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ಒಂದು ಮೆಮೊರಿ ಕಾರ್ಡ್‌ನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಸದರಿ ಮೆಮೊರಿ ಕಾರ್ಡ್‌ನ್ನು ಲ್ಯಾಪ್ ಟಾಪ್ಗೆ ಹಾಕಿ, ನಂತರ ಲ್ಯಾಪ್ ಟಾಪ್ ನಿಂದ ಒಂದು ಡಿವಿಡಿಗೆ ವರ್ಗಾಯಿಸಿ, ಡಿವಿಡಿಯಲ್ಲಿರುವ ಸಂಭಾಷಣೆಯನ್ನು ಪ್ಲೇ ಮಾಡಿ, ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬಂದಿರುತ್ತದೆ. ಲಂಚ ನೀಡಲು ತಂದ (ರೂ. 2,000/- ಮುಖಬೆಲೆಯ 01-ನೋಟು ಮತ್ತು ರೂ. 500/- ಮುಖಬೆಲೆಯ 02-ನೋಟುಗಳು) ಒಟ್ಟು 3,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ತನಿಖಾಧಿಕಾರಿಗಳು ಪಂಚರ ಕಡೆಯಿಂದ ಪ್ರತ್ಯೇಕ ಹಾಳೆಯಲ್ಲಿ ಬರೆಯಿಸಿದ್ದು, ಅವುಗಳ ನಂ. ಮತ್ತು ಮೌಲ್ಯವನ್ನು ಪಂಚ-ವೆಂಕಟರಾಜುರವರು ಪರಿಶೀಲಿಸಿ ಹೇಳಿದಂತೆ ಪಂಚ-ಶ್ರೀಮತಿ ಗೀತಾ ಕೆ.ಎನ್. ರವರು ಒಂದು ಹಾಳೆಯಲ್ಲಿ ನಮೂದಿಸಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲೀನ್ ಪೌಡರನ್ನು ಸವರಿ, ಸದರಿ ಹಣವನ್ನು ಪಂಚ ಸಾಕ್ಷಿ ವೆಂಕಟರಾಜುರವರ ಕೈಗೆ ಕೊಟ್ಟಿದ್ದು, ಸದರಿಯವರು ಸದರಿ ನೋಟುಗಳನ್ನು ಎಣಿಸಿ ಅವುಗಳ ನಂ. ಮತ್ತು ಮೌಲ್ಯವನ್ನು ತಾಳೆ ಮಾಡಿ ಖಾತ್ರಿ ಪಡಿಸಿಕೊಂಡಿರುತ್ತಾರೆ ಹಾಗೂ ಫಿನಾಪ್ತಲೀನ್ ಲೇಪಿತ ಹಣವನ್ನು ದೂರುದಾರರು ಧರಿಸದ್ದ ಪ್ಯಾಂಟಿನ ಮುಂಭಾಗದ ಬಲಗಡೆಯ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ವೆಂಕಟರಾಜುರವರ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಸೋಡಿಯಮ್

ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಶ್ರೀಮತಿ ಗೀತಾ ಕೆ.ಎನ್. ರವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಿ, ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ಅವರ ಕೈಗಳಿಂದ ತಲೆಯನ್ನು ಒರೆಸಿಕೊಳ್ಳುವಂತೆ ಸನ್ನೆ ಮಾಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಒಂದು ವಾಯ್ಸ್ ರೆಕಾರ್ಡ್‌ನ್ನು ದೂರುದಾರರಿಗೆ ತನಿಖಾಧಿಕಾರಿಗಳು ನೀಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರು ಹಾಜರುಪಡಿಸಿದ್ದ ಮೆಮೊರಿ ಕಾರ್ಡ್‌ನ್ನು ಲ್ಯಾಪ್ ಟಾಪ್ಗೆ ಅಳವಡಿಸಿ ಅದರಲ್ಲಿಯ ಸಂಭಾಷಣೆಯನ್ನು ಡಿವಿಡಿಗೆ ವರ್ಗಾಯಿಸಿರುತ್ತಾರೆ. ತನಿಖಾಧಿಕಾರಿಗಳು ಈ ಎಲ್ಲಾ ಘಟನಾವಳಿಗಳನ್ನು ಹಂತಹಂತವಾಗಿ ಫೋಟೋ ತೆಗೆಯಿಸಿ, ದಿನಾಂಕ.20.06.2018ರಂದು ಮಧ್ಯಾಹ್ನ 12-15ರಿಂದ 01-45 ಗಂಟೆಯವರೆಗೆ ತುಮಕೂರು ಎಸಿಬಿ ಕಚೇರಿಯಲ್ಲಿ ಪ್ರಾಯೋಗಿಕ ಪಂಚನಾಮೆಯನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ, ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

iv. ನಂತರ ಅದೇ ದಿನ ಅಂದರೆ ದಿನಾಂಕ:20/06/2018ರಂದು ಮಧ್ಯಾಹ್ನ 3-00 ಗಂಟೆಗೆ ದಾಳಿ ಸಿಬ್ಬಂದಿಯೊಂದಿಗೆ, ದೂರುದಾರರು ಹಾಗೂ ನೆರಳು ಸಾಕ್ಷಿಯೊಂದಿಗೆ ಇಲಾಖಾ ವಾಹನಗಳಲ್ಲಿ ಎಸಿಬಿ ಕಚೇರಿಯನ್ನು ಬಿಟ್ಟು ಸುಮಾರು 4-00 ಗಂಟೆಗೆ ಶಿರಾ ತಾಲ್ಲೂಕು ಕಚೇರಿಯ ಸ್ವಲ್ಪ ದೂರದಲ್ಲಿ ವಾಹನಗಳನ್ನು ನಿಲ್ಲಿಸಿ, ದೂರುದಾರರಿಗೆ ಹಾಗೂ ನೆರಳು ಸಾಕ್ಷಿರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ, ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿದ್ದು, ದೂರುದಾರರು ಹಾಗೂ ನೆರಳು ಸಾಕ್ಷಿರವರೊಂದಿಗೆ ಎದುರುದಾರರನ್ನು ತಾಲ್ಲೂಕು ಕಛೇರಿಯ ಹಕ್ಕು ದಾಖಲೆ ಕೊಠಡಿಯ ಹತ್ತಿರ ಬಂದು ಭೇಟಿ ಮಾಡಿದಾಗ ದೂರುದಾರರಿಗೆ ರೂ.3,000/- ಲಂಚದ ಹಣವನ್ನು ಕಡತದಲ್ಲಿ ಇಡಲು ಸನ್ನೆ ಮಾಡಿ ತಿಳಿಸಿದ್ದು, ಅದರಂತೆ ದೂರುದಾರರು ಎದುರುದಾರರ ಟೇಬಲ್ ಮೇಲೆ ಇದ್ದ ಕಡತದಲ್ಲಿ ಲಂಚದ ಹಣವನ್ನು ಇಟ್ಟಿರುತ್ತಾರೆ. ನಂತರ ದೂರುದಾರರು ಹೊರಗಡೆ ಬಂದು ತಮ್ಮ ತಲೆಯ ಕೂದಲನ್ನು ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿರುತ್ತಾರೆ.

v. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಎದುರುದಾರರು ಇದ್ದ ಸ್ಥಳಕ್ಕೆ ಬಂದು, ತಮ್ಮ

ಗುರುತಿನ ಚೀಟಿ ತೋರಿಸಿ ತಮ್ಮ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ದೂರುದಾರರಿಂದ ಮತ್ತು ನೆರಳುಸಾಕ್ಷಿರವರಿಂದ ಪ್ರಕರಣದ ವಿದ್ಯಾಮಾನವನ್ನು ತಿಳಿದುಕೊಂಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರು ಪಡಿಸುವಂತೆ ಸೂಚಿಸಿದಾಗ, ಎದುರುದಾರರು ದೂರುದಾರರು ಹಣವನ್ನು ಕಡತದಲ್ಲಿ ಇಟ್ಟಿದ್ದಾರೆಂದು ಹೇಳಿ, ಅವರ ಪಕ್ಕದಲ್ಲಿದ್ದ ಕಡತಗಳನ್ನು ಹುಡುಕುವಂತೆ ನಟಿಸಿದ್ದು, ಸದರಿ ಕಡತಗಳಲ್ಲಿ ಲಂಚದ ಹಣ ಕಂಡು ಬಂದಿರುವುದಿಲ್ಲ. ನಂತರ ಪುನ: ತನಿಖಾಧಿಕಾರಿಗಳು ಎದುರುದಾರರನ್ನು ಲಂಚದ ಹಣ ಎಲ್ಲಿ ಎಂದು ಕೇಳಿದಾಗ, ಆಗ ಎದುರುದಾರರು ಅವರ ವ್ಯಾನಿಟಿ ಬ್ಯಾಗಿನ ಜಿಪ್‌ನ್ನು ತೆರೆದು ಅದರಲ್ಲಿದ್ದ ಲಂಚದ ಹಣವನ್ನು ಎದುರುಗಡೆ ಇದ್ದ ಟೇಬಲ್ ಮೇಲೆ ಹಾಜರುಪಡಿಸಿರುತ್ತಾರೆ. ಆ ಹಣವನ್ನು ಪಂಚರ ಮೂಲಕ ತೆಗೆಯಿಸಿ ಪರಿಶೀಲಿಸಿದಾಗ ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹೋಲಿಕೆಯಾಗಿರುತ್ತವೆ. ಎದುರುದಾರರು ಈ ಬಗ್ಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಲಂಚದ ಹಣವನ್ನು ಇಟ್ಟಿದ್ದ ವ್ಯಾನಿಟಿ ಬ್ಯಾಗಿನ ಜಾಗವನ್ನು ಹತ್ತಿಯಿಂದ ಒರೆಸಿ, ಸದರಿ ಹತ್ತಿಯನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ದ್ರಾವಣವನ್ನು ಒಂದು ಬಾಟಲ್‌ಗೆ ಹಾಕಿ ಹಾಗೂ ಹತ್ತಿಯನ್ನು ಒಂದು ಖಾಲಿ ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದಿರುತ್ತಾರೆ. ಸದರಿ ಲಂಚದ ನೋಟುಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತಾರೆ ಹಾಗೂ ಎದುರುದಾರರು ಲಂಚದ ಹಣ ಇಟ್ಟ ವ್ಯಾನಿಟಿ ಬ್ಯಾಗ್‌ನ್ನು ಸಹಾ ತಮ್ಮ ವಶಕ್ಕೆ ಪಡೆದು ಕವರ್‌ನಲ್ಲಿ ಹಾಕಿ ಸೀಲ್ ಮಾಡಿರುತ್ತಾರೆ ಹಾಗೂ ಎದುರುದಾರರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಗೆ ಸಂಬಂಧಪಟ್ಟ ಕಡತವನ್ನು ಹಾಜರುಪಡಿಸಲು ತಿಳಿಸಿದಾಗ, ಅವರು ಹಾಜರುಪಡಿಸಿದ್ದು, ಅದರಲ್ಲಿದ್ದ ಮೂಲ ದಾಖಲೆಗಳನ್ನು ಜೆರಾಕ್ಸ್ ಮಾಡಿಸಿ, ಎದುರುದಾರರ ಮೇಲಾಧಿಕಾರಿಗಳಾದ ಶ್ರೀ. ಆರ್. ಗಂಗೇಶ್, ತಹಶೀಲ್ದಾರ್, ಶಿರಾ ತಾಲ್ಲೂಕು, ರವರಿಂದ ಧೃಢೀಕರಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ನೀಡಿದ್ದ ವಾಯ್ಸ್ ರೆಕಾರ್ಡ್‌ನ್ನು ಕೇಳಲಾಗಿ, ದೂರುದಾರರು ಎದುರುದಾರರನ್ನು ಭೇಟಿ ಮಾಡುವ ಸಮಯದಲ್ಲಿ ವಾಯ್ಸ್

ರೆಕಾರ್ಡ್‌ನ್ನು ಆನ್ ಮಾಡಿಕೊಳ್ಳುವುದನ್ನು ಮರೆತಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಟ್ರ್ಯಾಪ್ ಪೂರ್ವದಲ್ಲಿ ದೂರುದಾರರು ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದು, ಅದರ ಮೆಮೊರಿ ಕಾರ್ಡ್‌ನ್ನು ಲ್ಯಾಪ್ ಟಾಪ್‌ಗೆ ಹಾಕಿ, ಅದರಲ್ಲಿರುವ ಸಂಭಾಷಣೆಯನ್ನು ಪ್ಲೇ ಮಾಡಿ ಎದುರುದಾರರ ಮೇಲಾಧಿಕಾರಿಗಳಾದ ಶ್ರೀ. ಆರ್. ಗಂಗೇಶ್, ತಹಶೀಲ್ದಾರ್, ಶಿರಾ ತಾಲ್ಲೂಕು, ರವರಿಗೆ ಕೇಳಿಸಿದಾಗ, ಅವರು ಇದರಲ್ಲಿ ಒಬ್ಬ ಮಹಿಳೆಯ ಧ್ವನಿಯಿದ್ದು, ಅದು ಅವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎದುರುದಾರರದ್ದು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದು ಲಿಖಿತವಾಗಿ ಧೃಢೀಕರಿಸಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಟ್ರ್ಯಾಪ್ ಪೂರ್ವದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಹಾಗೂ ದೂರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಡಿವಿಡಿಗಳನ್ನು ತಯಾರಿಸಿರುತ್ತಾರೆ.

viii. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ಸಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿ ಚಿನ್ನೇನಹಳ್ಳಿ ಗ್ರಾಮದ ಸ.ನಂ. 3/3ರ ಪ್ರಕರಣದ ಸಂಬಂಧ ಈಗಾಗಲೇ ತಹಶೀಲ್ದಾರ್ ಸಿರಾ, ಇವರ ಕೋರ್ಟ್ ಆದೇಶದಂತೆ ಖಾತೆ ಮತ್ತು ಪಹಣಿ ಬದಲಾವಣೆ ಆಗಿದ್ದು, ಅರ್ಜಿದಾರರಾದ ಮನೋಜ್ ಕುಮಾರ್ ಇವರು ಬಲವಂತವಾಗಿ ನನಗೆ ಹಣ ನೀಡಿದ್ದೆ. ನನ್ನದು ಯಾವುದೇ ರೀತಿಯ ತಪ್ಪನ್ನು ಮಾಡಿರುವುದಿಲ್ಲ. ಅರ್ಜಿದಾರರು ಉದ್ದೇಶ ಪೂರ್ವಕವಾಗಿ ನನ್ನ ಮೇಲೆ ಆರೋಪ ಮಾಡಿದ್ದು, ಯಾವುದೇ ರೀತಿಯಲ್ಲಿ ಕರ್ತವ್ಯಕ್ಕೆ ತೊಂದರೆಯಾಗದ ರೀತಿ ಕಾರ್ಯ ನಿರ್ವಹಿಸಿದ್ದು, ನನಗೆ ದುರುದ್ದೇಶದಿಂದ ಮತ್ತು ವೈರತ್ವದಿಂದ ಈ ರೀತಿ ನನ್ನ ಮೇಲೆ ಆರೋಪ ಮಾಡಿದ್ದು, ದಯವಿಟ್ಟು ನನ್ನ ಮೇಲಿನ ಆರೋಪವನ್ನು ಮುಕ್ತಗೊಳಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ.

ix. ನಂತರ ತನಿಖಾಧಿಕಾರಿಗಳು ದೂರುದಾರರನ್ನು ಹಾಗೂ ನೆರಳುಸಾಕ್ಷಿಯವರನ್ನು ಎದುರುದಾರರ ಸಮಜಾಯಿಷಿಯ ಬಗ್ಗೆ ಕೇಳಿದಾಗ, ಎದುರುದಾರರು ಹಾಗೂ ನೆರಳುಸಾಕ್ಷಿಯವರು ಆರೋಪಿತೆ ವಿಜಯಲಕ್ಷ್ಮೀ ನೀಡಿರುವ ಲಿಖಿತ ವಿವರಣೆ ತಪ್ಪಾಗಿರುವುದಾಗಿ ತಿಳಿಸಿರುತ್ತಾರೆ. ಎದುರುದಾರರು ಈ ದಿನ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು

ಎದುರುದಾರರನ್ನು ದಸ್ತಗಿರಿ ಮಾಡಿದ ಬಗ್ಗೆ ಅವರ ಮೇಲಾಧಿಕಾರಿಗಳಾದ ಶ್ರೀ. ಆರ್. ಗಂಗೇಶ್, ತಹಶೀಲ್ದಾರ್, ಶಿರಾ ತಾಲ್ಲೂಕು, ರವರಿಗೆ ತಿಳಿಸಿರುತ್ತಾರೆ.

x. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿ, ದಿ.20/06/2018ರಂದು ಶಿರಾ ತಾಲ್ಲೂಕು ಕಚೇರಿಯ ಹಕ್ಕುದಾಖಲೆಗಳ ಶಾಖೆಯಲ್ಲಿ ಸಂಜೆ 06–00 ಗಂಟೆಯಿಂದ ರಾತ್ರಿ 09–30 ಗಂಟೆಯವರೆಗೆ ಟ್ರ್ಯಾಪ್ ಪಂಚನಾಮೆಯನ್ನು ತನಿಖಾಧಿಕಾರಿಗಳು ಉಕ್ತಲೇಖನ ನೀಡಿ ತಮ್ಮ ಸಿಬ್ಬಂದಿಯಿಂದ ಲ್ಯಾಪ್‌ಟಾಪ್ ಮೂಲಕ ಬೆರಳಚ್ಚು ಮಾಡಿಸಿರುತ್ತಾರೆ.

xi. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ, ಧ್ವನಿ ವಿಶ್ಲೇಷಣಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 01/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ತಾನು ಸರ್ಕಾರಿ ನೌಕರಳಾಗಿದ್ದು ಯಾವುದೇ ದುರ್ನಡತೆಯನ್ನು ತೋರಿರುವುದಿಲ್ಲ, ತಾನು ಲಂಚದ ಹಣವನ್ನು ಪಡೆದಿರುವುದಿಲ್ಲ ಹಾಗೂ ಜಮೀನು ಖಾತೆ ಬದಲಾವಣೆ ಬಗ್ಗೆ ಯಾವುದೇ ಮುಂಗಡವಾಗಿ ನಾಲ್ಕು ಸಾವಿರ ರೂಪಾಯಿ ಲಂಚದ ಹಣ ಪಡೆದಿರುವುದಿಲ್ಲ. ತಾನು ತಹಶಿಲ್ದಾರ್ ಕಚೇರಿ ನ್ಯಾಯಾಲಯದ ಪ್ರಕರಣಗಳನ್ನು

ಕರೆಯಲು ಹಾಗೂ ಕಡತಗಳನ್ನು ಮಂಡಿಸಲು ನ್ಯಾಯಾಲಯದ ಸಭಾಂಗಣದಲ್ಲಿದ್ದಾಗ, ದೂರುದಾರರು ದುರುದ್ದೇಶದಿಂದ ಟೇಬಲ್ ಮೇಲೆ ಇದ್ದ ಕಡತದಲ್ಲಿ ಹಣವನ್ನು ಇಟ್ಟಿರುತ್ತಾರೆ. ತಾನು ದೂರುದಾರರಿಗೆ ಯಾವುದೇ ಹಣ ಇಡಲು/ಕಡತದಲ್ಲಿ ಹಣ ಇಡಲು ತಿಳಿಸಿರುವುದಿಲ್ಲ. ದೂರುದಾರರು ಯಾವ ಕಡತದಲ್ಲಿ ಹಣ ಇಟ್ಟಿದ್ದಾರೆಂದು ತಿಳಿದಿರುವುದಿಲ್ಲ. ಆದರೆ ದೂರುದಾರರು ಟೇಬಲ್ ಮೇಲೆ ಇದ್ದ ಕಡತದಲ್ಲಿ ಹಣವನ್ನು ಇಡುವ ಸಂದರ್ಭದಲ್ಲಿ ತಾನು ನ್ಯಾಯಾಲಯದ ಸಭಾಂಗಣದಲ್ಲಿರುತ್ತೇನೆ, ಹಣ ಕಡತದಲ್ಲಿ ಇಟ್ಟು ನನ್ನ ಮೇಲೆ ಆರೋಪ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದೂ ಅಲ್ಲದೆ ಜಿಲ್ಲಾ ಸತ್ರ ನ್ಯಾಯಾಲಯ, ತುಮಕೂರು, ಇಲ್ಲಿ ಸ್ಪೆಶಲ್ ಕೇಸ್ ನಂ.331/2019ರಂತೆ ವಿಚಾರಣೆ ನಡೆದು ತಾನು ನಿರಪರಾಧಿ ಎಂದು ಬಿಡುಗಡೆಯಾಗಿರುತ್ತೇನೆ. ಆ ಕಾರಣದಿಂದ ತನ್ನ ಮೇಲೆ ನಡೆಸಲು ತೀರ್ಮಾನವಾಗಿರುವ ಇಲಾಖಾ ವಿಚಾರಣೆಯನ್ನು ಕೈ ಬಿಡಲು ವಿನಂತಿಸಿಕೊಳ್ಳುತ್ತೇನೆ. ತಾನು ಸರ್ಕಾರಿ ನೌಕರಿಯಲ್ಲಿ ನಿಯಮ/ನಿಷ್ಠೆಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಯಾವುದೇ ದುರ್ನಡತೆಯನ್ನು ತೋರಿರುವುದಿಲ್ಲ ಮತ್ತು ಸೇವಾ ನಡತೆಗಳನ್ನು ಉಲ್ಲಂಘಿಸಿರುವುದಿಲ್ಲ” ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

16/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.